# ಮತ್ತೆ ಫ್ಯಾನ್ಸಿ ಡ್ರೆಸ್ ತೊಟ್ಟ ರಣವೀರ್



ದೀಪಿಕಾ ಪಡುಕೋಣೆ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾದ ಮೇಲೆ ಅಸಂಖ್ಯ ಕ್ಯಾಮೆರಾ ಕಣ್ಣುಗಳು ಅವರ ಹಿಂದೆ ಬಿದ್ದಿವೆ. ಅವರಷ್ಟೇ ಅಲ್ಲ, ಅವರ ಪತಿರಾಯ ರಣವೀರ್ ಸಿಂಗ್ ಚಲನವಲನಗಳ ಮೇಲೆ ನಿಗಾ ಇಟ್ಟಿರುವವರೂ ಹೆಚ್ಚು. ರಣವೀರ್ ಮೊದಲಿನಿಂದಲೂ ಷೋ ಮ್ಯಾನ್. ಅಸಡಾಬಸಡಾ ಉಡುಗೆ ತೊಡುವ ಮೂಲಕ ಆಗೀಗ ಗಮನ ಸೆಳೆಯುತ್ತಿರುತ್ತಾರೆ. ದೀಪಿಕಾ ಹೊಸ ಸಂಕಟದ ದಿನಗಳನ್ನು ಹಾದುಹೋಗುತ್ತಿದ್ದಾಗ ಅವರು ಅಂತಹ ದಿರಿಸು ತೊಟ್ಟು ಓಡಾಡಿರಲಿಲ್ಲಷ್ಟೆ. ಡಿಸೆಂಬರ್‌ನಲ್ಲಿ ಚಳಿ ತೀವ್ರವಾಗುತ್ತಿರುವಾಗ ಅವರು ಮತ್ತೆ ತಮ್ಮ ಹಳೆಯ ತುಂಟತನದ ದಿನಗಳಿಗೆ ಮರಳಿದಂತಿದೆ.

ಇತ್ತೀಚೆಗೆ ಅವರು ತಮ್ಮ ಪತ್ನಿ ದೀಪಿಕಾ ಅವರನ್ನು 'ಅಲಿಬಾಗ್' ಚಿತ್ರೀಕರಣಕ್ಕೆಂದು ಇಂಡಿಯಾ ಗೇಟ್‌ಗೆ ಬಿಟ್ಟುಬಂದರು. ಆಗ ಪತಿ–ಪತ್ನಿ ಇಬ್ಬರನ್ನೂ ಬೆನ್ನಟ್ಟಿದ ಕ್ಯಾಮೆರಾಗಳು ಬೆಳಕು ಚೆಲ್ಲಿದವು. ಅಲ್ಲಿ ಒಂದು ತಮ್ಮದೇ ಬಿಂದಾಸ್ ನಗುವನ್ನು ಚೆಲ್ಲಿದ್ದ ರಣವೀರ್, ಇನ್‌ಸ್ಟಾಗ್ರಾಂನಲ್ಲೂ ಮತ್ತೆ ಚುರುಕಾಗಿದ್ದಾರೆ.

ಇನ್ನೊಂದು 'ಫ್ಯಾನ್ಸಿ ಡ್ರೆಸ್' ತೊಟ್ಟಿರುವ ಅವರು ಕೈಯಲ್ಲಿ ಮದ್ಯದ ಲೋಟವನ್ನು ಹಿಡಿದು, 'ಡಿಸೆಂಬರ್‌ನಲ್ಲಿ ದುರಿತಗಳೆಲ್ಲ ಕಮರಿಹೋಗಲಿ. ಎಲ್ಲರೂ ಹಬ್ಬದ ಮೂಡ್‌ಗೆ ಬರೋಣ' ಎಂದು ಆಶಿಸಿದ್ದಾರೆ. '83' ಹಿಂದಿ ಸಿನಿಮಾದಲ್ಲಿ ಕಪಿಲ್ ದೇವ್ ಪಾತ್ರಕ್ಕೆ ಬಣ್ಣಹಚ್ಚಿರುವ ಅವರಿಗೆ ಜೋಡಿಯಾಗಿ ದೀಪಿಕಾ ನಟಿಸುತ್ತಿದ್ದಾರೆ. ಆ ಚಿತ್ರೀಕರಣವಿನ್ನೂ ಬಾಕಿ ಇದೆ. 'ಸೂರ್ಯವಂಶಿ' ಚಿತ್ರದ ಸಣ್ಣ ಪಾತ್ರದಲ್ಲಿ ರಣವೀರ್ ನಟಿಸುತ್ತಿದ್ದಾರೆ. 'ಜಯೇಶ್‌ಭಾಯ್ ಜೋರ್‌ದಾರ್' ಹಾಗೂ 'ಸಿರ್ಕಸ್' ರಣವೀರ್ ಅಭಿನಯಿಸುತ್ತಿರುವ ಇತರ ಚಿತ್ರಗಳು. ತಮ್ಮದೇ ಸೂತ್ರದ ರಂಜನೆಯ ಸಿನಿಮಾಗಳನ್ನು ಮಾಡುವ ರೋಹಿತ್ ಶೆಟ್ಟಿ ನಿರ್ದೇಶನದ 'ಸಿರ್ಕಸ್' ಚಿತ್ರೀಕರಣದಲ್ಲಿ ಸದ್ಯ ಹೆಚ್ಚಾಗಿ ತೊಡಗಿಕೊಂಡಿರುವ ರಣವೀರ್ ಮತ್ತೆ ಹಳೆಯ ಕೆಲಸದ ಲಯಕ್ಕೆ ಮರಳಿದ ಖುಷಿಯನ್ನು ಅಭಿಮಾನಿಗಳ ಜತೆ ಹಂಚಿಕೊಂಡಿದ್ದಾರೆ. ■



# ಬಾಲಿವುಡ್‌ನಲ್ಲಿ ರಕುಲ್ ಮೊಕ್ಕಾಂ

ತೆಲುಗಿನ ಓಣಿಗಳಲ್ಲಿ ಸದ್ದು ಮಾಡಿ, ಈಗ ಅಲ್ಲಿಂದ ಜಾಗ ಕಿತ್ತಿರುವ ರಕುಲ್ ಪ್ರೀತ್ ಸಿಂಗ್ ಈಗೇನು ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಅವರ ಅಭಿಮಾನಿಗಳಿಗೆ ಇತ್ತು. ಸಾಮಾಜಿಕ ಜಾಲತಾಣಗಳಲ್ಲಿ ಅದಕ್ಕೀಗ ಉತ್ತರ ಸಿಕ್ಕಿದೆ. ರಕುಲ್ ಲಾಕ್‌ಡೌನ್‌ನಲ್ಲಿ ಸಣ್ಣ ಕದಲಿಕೆಗಳ ಕೆಲವು ವಿಡಿಯೊಗಳನ್ನು ಮಾಡಿ, ಎಷ್ಟು ಲೈಕ್‌ಗಳು ಬಿದ್ದವು ಎಂದು ಕಣ್ಣರಳಿಸಿ ನೋಡಿದ್ದರಷ್ಟೆ. ಅವರು ವ್ಯಾಕುಲ ನೀಗಿಕೊಳ್ಳಲೆಂದು ಮಾಲ್ಡೀವ್ಸ್ ಪ್ರವಾಸ ಮಾಡಿಬಂದಿದ್ದಾರೆ. ಅಲ್ಲಿ ನೀರಿನ ನಡುವೆ ಫ್ಲೈಬೋರ್ಡ್ ಮೇಲೆ ನಿಂತು ಈಜುಡುಗೆಯಲ್ಲಿ ಅವರು ನೀಡಿರುವ ಪೋಸ್ ಅನ್ನು ಲಕ್ಷಾಂತರ ಅಭಿಮಾನಿಗಳು ಲೈಕ್ ಮಾಡಿದ್ದಾರೆ.

ರಕುಲ್ ಅವರ ಹೆಸರು ಕೂಡ ಡ್ರಗ್ಸ್ ಪ್ರಕರಣದಲ್ಲಿ ಕೇಳಿಬಂದಿತ್ತು. ಆದರೆ, ಆಮೇಲೆ ಅವರು ಆ ಸಂಕಷ್ಟದಿಂದ ಹೊರಬಂದಂತೆ ತಮ್ಮದೇ ಲೋಕದಲ್ಲಿ ವಿಹರಿಸಿದರು. ಬಾಲಿವುಡ್‌ನಲ್ಲಿ ನೆಲೆ ಕಂಡುಕೊಳ್ಳಬೇಕೆಂದು ಹೆಣಗಾಡುತ್ತಿರುವ ಅವರು ಕಾಶಿವೆ ನಾಯರ್ ನಿರ್ದೇಶನದ ಪೀರಿಯಾಡಿಕಲ್ ಸಿನಿಮಾದಲ್ಲಿ ಅಭಿನಯಿಸುವುದು ನಿಕ್ಕಿಯಾಗಿದೆ. 1947ರ ಕಾಲಘಟ್ಟದ ಕಥೆಯನ್ನೊಳಗೊಂಡ ಚಿತ್ರ ಅದು. ಜಾನ್ ಅಬ್ರಹಾಂ, ಅದಿತಿ ರಾವ್ ಹೈದರಿ ಕೂಡ ಆ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ. ಅದಲ್ಲದೆ ಅಮಿತಾಭ್ ಬಚ್ಚನ್ ಹಾಗೂ ಅಜಯ್ ದೇವಗನ್ ನಟಿಸಿರುವ 'ಮೇಡೇ' ಸಿನಿಮಾದ ಪಾತ್ರಕ್ಕು ಬಣ್ಣ ಹಚ್ಚಲಿದ್ದಾರೆ. ಇದೇ ತಿಂಗಳು ಹೈದರಾಬಾದ್‌ನಲ್ಲಿ ಅದರ ಚಿತ್ರೀಕರಣ ನಡೆಯಲಿದೆ.

'ಬಚ್ಚನ್ ಸರ್, ಅಜಯ್ ಸರ್ ತರಹದವರ ಜತೆ ನಟಿಸುವ ಅವಕಾಶ ಸಿಕ್ಕಿರುವುದಕ್ಕೆ ನನಗೆ ಆಗಿರುವ ಖುಷಿಗೆ ಪಾರವೇ ಇಲ್ಲ. ಇಂಥದೊಂದು ದಿನ ಯಾವಾಗ ಬಂದೀತೋ ಎಂದು ಕನಸಿದ್ದೆ. ಸಂಯಮದಿಂದ ಕಾಯ್ದರೆ ಬಂದೇ ಬರತಾವ ಕಾಲ' ಎಂದು ರಕುಲ್ ತಮಗಾಗಿರುವ ಸಂತೋಷ ಹಂಚಿಕೊಂಡಿದ್ದಾರೆ.

■ ವಿಶಾಖ ಎನ್.